ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಬೆವಿಕಂ/ನಿ(ಹ)ಪ್ರವ್ಯ(ಕಂ)/ಉಪ್ರವ್ಯ(ಕಂ)/ಸಪ್ರವ್ಯ(ಕಂ-1)/2202(43)/2021-22
ಲಗತ್ತು: ಸರ್ಕಾರದ ಆದೇಶ

CYS-05

ಕಂಪನಿ ಕಾರ್ಯಾಲಯ
ಕೆ.ಆರ್.ವೃತ್ತ, ಬೆಂಗಳೂರು-1
ದಿನಾಂಕ: 13 SEP 2021

# ಸುತ್ತೋಲೆ

**ವಿಷಯ:** : ಕೋವಿಡ್-19 ಲಾಕ್‌ಡೌನ್ ರಿಂದಾಗುವ ಪರಿಣಾಮಗಳನ್ನು ತಗ್ಗಿಸಲು ಕರ್ನಾಟಕ ರಾಜ್ಯದಲ್ಲಿರುವ ಸಿನಿಮಾ ಸ್ಟುಡಿಯೋ ಪ್ರವರ್ಗದ ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಬಿಲ್ಲುಗಳಲ್ಲಿನ ಬೇಡಿಕೆ/ನಿಗಧಿತ ಶುಲ್ಕವನ್ನು ಮನ್ನಾ ಮಾಡುವ ಬಗ್ಗೆ.

**ಉಲ್ಲೇಖ:** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎನರ್ಜಿ 414 ಪಿ ಎಸ್ ಆರ್ 2020 ದಿನಾಂಕ 06.08.2021.

*******

ಕರ್ನಾಟಕ ಸರ್ಕಾರವು ಕೋವಿಡ್-19 ವೈರಾಣು ಹರಡುವಿಕೆಯಿಂದ ಉಂಟಾಗಿರುವ ಪರಿಣಾಮಗಳನ್ನು ತಗ್ಗಿಸಲು ಕರ್ನಾಟಕ ರಾಜ್ಯದಲ್ಲಿರುವ ಸಿನಿಮಾ ಸ್ಟುಡಿಯೋ ಪ್ರವರ್ಗದ ವಿದ್ಯುತ್ ಗ್ರಾಹಕರಿಗೆ **" 2020-2021 ನೇ ಸಾಲಿಗೆ ಅನ್ವಯಿಸುವಂತೆ ಏಪ್ರಿಲ್-2020 ರಿಂದ ಜೂನ್-2020 ಮಾಹೆಗಳವರೆಗಿನ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕಗಳನ್ನು ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ."** ಸರ್ಕಾರದ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.

- **ರಾಜ್ಯದಲ್ಲಿ ಸಿನಿಮಾ ಸ್ಟೂಡಿಯೋಗಳೆಂದು ಅಧಿಕೃತ ಪ್ರಾಧಿಕಾರದಿಂದ ಗುರುತಿಸಲ್ಪಟ್ಟಿರುವ ಹಾಗೂ ಸದರಿ ಸಂಸ್ಥೆಗಳನ್ನು ಕರ್ನಾಟಕ ರಾಜ್ಯದಲ್ಲಿ ನಡೆಸಲು ಆಧಾರವುಳ್ಳ ಪ್ರಮಾಣ ಪತ್ರ /ಪರವಾನಿಗೆಯನ್ನು ಹೊಂದಿರುವ** ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಪಡೆದು ಪರಿಶೀಲಿಸಿ ಸದರಿ ರಿಯಾಯಿತಿಯನ್ನು RAPDRP ಮತ್ತು TRM ತಂತ್ರಾಂಶದಲ್ಲಿ ಹೊಸದಾಗಿ ರಚಿಸಿರುವ **"Waiveoff on Demand/Fixed Charges for Cinema Studio"** ಹೊಂದಾಣಿಕೆಯನ್ನು ಆಯ್ಕೆ ಮಾಡಿ ಮನ್ನಾ ಮಾಡಬೇಕಿರುವ ಬೇಡಿಕೆ/ನಿಗಧಿತ ಶುಲ್ಕ ಮೊತ್ತವನ್ನು ನಮೂದಿಸಿ ಹೊಂದಾಣಿಕೆ ನೀಡುವುದು. **ಪ್ರತಿ ತಿಂಗಳು ಪ್ರತ್ಯೇಕ ಹೊಂದಾಣಿಕೆ ನೀಡತಕ್ಕದ್ದು.**
- ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು((Demand Charge/Fixed charge)ಮನ್ನಾ ಮಾಡಿದ ಮೊತ್ತವನ್ನು ಸರ್ಕಾರದಿಂದ ಭರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುವುದರಿಂದ ರಿಯಾಯಿತಿ ಪಡೆದ ಗ್ರಾಹಕರ ವಿವರಗಳನ್ನು ಪ್ರತಿ ಮಾಹೆ 5 ನೇ ತಾರಿಖಿನೊಳಗೆ ನಿಗಧಿತ ನಮೂನೆಯಲ್ಲಿ ಕ್ರೋಢೀಕರಿಸಿ ಲೆಕ್ಕಾಧಿಕಾರಿ (ಆಂ.ಪ) ರವರಿಂದ ದೃಢೀಕರಣ ಪಡೆದು ವಿಭಾಗೀಯ ಕಚೇರಿಯಿಂದ ಪ್ರಧಾನ ವ್ಯವಸ್ಥಾಪಕರು(ಕಂದಾಯ), ನಿಗಮ ಕಛೇರಿ ರವರಿಗೆ ತಪ್ಪದೇ 10ನೇ ತಾರೀಖಿನೊಳಗೆ ಸಲ್ಲಿಸುವುದು.
- ಸದರಿ ಗ್ರಾಹಕರಿಗೆ ನೀಡಲಾಗುವ ಬೇಡಿಕೆ/ನಿಗಧಿತ ಶುಲ್ಕದ ಹೊಂದಾಣಿಕೆಯು ಡಿ.ಸಿ.ಬಿ. ವರದಿಯ ವಸೂಲಾತಿ ಅಂಕಣದಲ್ಲಿ ಹೊಂದಾಣಿಕೆಯಡಿಯಲ್ಲಿ ಬರುವುದರಿಂದ, ಮೇಲಿನ ಕಂಡಿಕೆಯಲ್ಲಿ ತಿಳಿಸಿರುವ ಆರ್.ಆರ್. ಸಂಖ್ಯೆವಾರು ವಿವರಗಳೊಂದಿಗೆ ಸೂಕ್ತ ಪರಿಶೀಲನೆ ನಡೆಸಿ ಡಿಸಿಬಿ ಮೊತ್ತಕ್ಕೆ ತಾಳೆ ಮಾಡುವುದು ಮತ್ತು ಲೆಕ್ಕ ಶೀರ್ಷಿಕೆ **" 79.8877 "** ರಲ್ಲಿ ಲೆಕ್ಕೀಕರಿಸುವುದು.

* ಹೊಂದಾಣಿಕೆ ವಿವರಗಳನ್ನು ಪ್ರತ್ಯೇಕ ರೆಜಿಸ್ಟರ್‌ನಲ್ಲಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

ಡಾ॥ ಆರ್.ಸಿ. ಚೇತನ್ IRS
ನಿರ್ದೇಶಕರು (ಹಣಕಾಸು)

ಪ್ರತಿ:

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.
2. ಮುಖ್ಯ ಇಂಜಿನಿಯರ್(ವಿ)/ಲೆಕ್ಕನಿಯಂತ್ರಣಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ಬೆಂ.ಮ.ಕ್ಷೇ ಉತ್ತರ/ದಕ್ಷಿಣ/ಬೆಂ.ಗ್ರಾ.ಕ್ಷೇ/ಚಿ.ಕ್ಷೇ ವಲಯ ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಪ್ರಧಾನ ವ್ಯವಸ್ಥಾಪಕರು (ಲೆ ಮತ್ತು ಜ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿಗಾಗಿ ಹಾಗೂ ಲೆಕ್ಕೀಕರಿಸುವ ವಿಧಾನವನ್ನು ಕ್ಷೇತ್ರಾಧಿಕಾರಿಗಳಿಗೆ ಒದಗಿಸುವುದು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ವೃತ್ತ ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ.
6. ಎಲ್ಲಾ ವಿಭಾಗೀಯ ಲೆಕ್ಕಾಧಿಕಾರಿ(ಆಂ.ಪ) ಶಾಖೆ, ಬೆವಿಕಂ ರವರ ಸೂಕ್ತ ಕ್ರಮಕ್ಕಾಗಿ.
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಸಹಾಯಕ ಲೆಕ್ಕಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ಉಪ–ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ.
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ) ಇವರ ಆಪ್ತ ಕಾರ್ಯದರ್ಶಿಗಳು ಬೆವಿಕಂ, ನಿಗಮ ಕಾರ್ಯಾಲಯ.
9. ಮಹಾಕಡತ/ಕಡತ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** COVID-19 Lockdown ರಿಂದಾಗುವ ಪರಿಣಾಮಗಳನ್ನು ತಗ್ಗಿಸಲು ಕರ್ನಾಟಕ ರಾಜ್ಯದಲ್ಲಿರುವ ಸಿನಿಮಾ ಸ್ಟುಡಿಯೋ ಪ್ರವರ್ಗದ ವಿದ್ಯುತ್ ಗ್ರಾಹಕರಿಗೆ ಪರಿಹಾರ ನೀಡುವ ಕುರಿತು.

**ಓದಲಾಗಿದೆ:** ಕರ್ನಾಟಕ ವಾಣಿಜ್ಯ ಮಂಡಳಿಯ ನಿಯೋಗವು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ದಿನಾಂಕ: 10.09.2020 ರಂದು ನಡೆಸಿದ ಸಭಾ ನಡವಳಿ.

**ಪ್ರಸ್ತಾವನೆ:-**

2020-21 ನೇ ಸಾಲಿನಲ್ಲಿ ರಾಜ್ಯದಲ್ಲಿ COVID-19 ಸಾಂಕ್ರಾಮಿಕ ರೋಗ ಹರಡುವುದನ್ನು ನಿಯಂತ್ರಿಸಲು Lockdown ಜಾರಿಗೆ ತರಲಾಯಿತು ಮತ್ತು ಅದನ್ನು ಕಾಲಕಾಲಕ್ಕೆ ವಿಸ್ತರಿಸಲಾಯಿತು. COVID-19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ನಿಯಂತ್ರಿಸಲು ಸಾರ್ವಜನಿಕರ ಚಲನ ಮತ್ತು ಕಛೇರಿ ಸಂಸ್ಥೆಗಳ ತೆರೆಯುವಿಕೆ ಇತ್ಯಾದಿಗಳಿಗೆ ರಾಜ್ಯ ಸರ್ಕಾರವು ಹಲವಾರು ನಿರ್ಬಂಧನೆಗಳನ್ನು ವಿಧಿಸಿದೆ. ಈ ಬಿಕ್ಕಟ್ಟಿನ ಸಮಯದಲ್ಲಿ ಹಾಗೂ ಈ ಅಭೂತಪೂರ್ವ ಪರಿಸ್ಥಿತಿಯು ಇನ್ನೂ ಸ್ವಲ್ಪ ಸಮಯದವರೆಗೆ ಮುಂದುವರೆಯುವ ಸಾಧ್ಯತೆ ಇರುವುದರಿಂದ ವಿದ್ಯುತ್ ಗ್ರಾಹಕರು ತಮ್ಮ ವಿದ್ಯುತ್ ಬಿಲ್ ಮೊತ್ತವನ್ನು ಸಮಯಕ್ಕೆ ಸರಿಯಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸುವುದು ಕಷ್ಟಕರವಾಗಿದೆ ಎಂದು ತಿಳಿದು ಬಂದಿದೆ.

ಮೇಲೆ ಓದಲಾದ ಸಭಾ ನಡವಳಿಯ ಕ್ರಮಸಂಖ್ಯೆ: 9ರಲ್ಲಿ ಕರ್ನಾಟಕ ವಾಣಿಜ್ಯ ಮಂಡಳಿಯ ನಿಯೋಗವು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿದ ಸಭೆಯಲ್ಲಿ COVID-19 Lockdown ರಿಂದಾಗುವ ಪರಿಣಾಮಗಳನ್ನು ತಗ್ಗಿಸುವ ಸಲುವಾಗಿ, ಸಿನಿಮಾ ಸ್ಟೂಡಿಯೋಗಳಿಗೆ ವಿಧಿಸಿರುವ ವಿದ್ಯುತ್ ಶುಲ್ಕದಲ್ಲಿ ವಿನಾಯಿತಿ ನೀಡುವಂತೆ ಕೋರಿರುತ್ತಾರೆ.

ಕರ್ನಾಟಕ ರಾಜ್ಯದಲ್ಲಿರುವ ಸಿನಿಮಾ ಸ್ಟೂಡಿಯೋ ಪ್ರವರ್ಗದ ವಿದ್ಯುತ್ ಗ್ರಾಹಕರಿಗೆ ಏಪ್ರಿಲ್ 2020 ರಿಂದ ಜೂನ್ 2020ರ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕಗಳನ್ನು ಪಾವತಿಸುವುದರಿಂದ ವಿನಾಯಿತಿಯನ್ನು ನೀಡಲು ಸರ್ಕಾರವು ನಿರ್ಧರಿಸಿರುವುದರಿಂದ, ಈ ಕೆಳಕಂಡ ಆದೇಶ.

ಬೆ.ವಿ.ಕಂ. ಕಂಪನಿ ಕಾರ್ಯದರ್ಶಿ ಬೆಂಗಳೂರು ಸಂಖ್ಯೆ 3153 ದಿನಾಂಕ 9/8/21
9 AUG 2021
ಪ್ರವ್ಯ (ಕಂದಾಯ), ಬೆ.ವಿ.ಕಂ, ನಿಗಮ ಕಛೇರಿ, ಬೆಂಗಳೂರು-01. ಸಂಖ್ಯೆ 500 ದಿನಾಂಕ 12/8/21
ಉಪ್ರವ್ಯ (ಕಂ)-1
ಉಪ್ರವ್ಯ (ಕಂ)-2
ಉಪ್ರವ್ಯ (ಹೆಚ್.ಟಿ)
ಪ್ರವ್ಯ(ಕಂ)

**ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 414 ಪಿಎಸ್ಆರ್ 2020**

**ಬೆಂಗಳೂರು, ದಿನಾಂಕ: 06.08.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21 ನೇ ಸಾಲಿಗೆ ಅನ್ವಯಿಸುವಂತೆ ರಾಜ್ಯದಲ್ಲಿ ಸಿನಿಮಾ ಸ್ಟೂಡಿಯೋಗಳೆಂದು ಅಧಿಕೃತ ಪ್ರಾಧಿಕಾರದಿಂದ ಗುರುತಿಸಲ್ಪಟ್ಟು ಹಾಗೂ ಸದರಿ ಸಂಸ್ಥೆಗಳನ್ನು ಕರ್ನಾಟಕ ರಾಜ್ಯದಲ್ಲಿ ನಡೆಸಲು ಆಧಾರವುಳ್ಳ ಪ್ರಮಾಣ ಪತ್ರ / ಪರವಾನಿಗೆಯನ್ನು ಹೊಂದಿರುವ ಸಿನಿಮಾ ಸ್ಟೂಡಿಯೋ ಪ್ರವರ್ಗದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಈ ಕೆಳಕಂಡ ಪರಿಹಾರವನ್ನು ನೀಡಲು ಸರ್ಕಾರವು ಆದೇಶಿಸಿದೆ.

> **"2020-21 ನೇ ಸಾಲಿಗೆ ಅನ್ವಯಿಸುವಂತೆ ಏಪ್ರಿಲ್-2020 ರಿಂದ ಜೂನ್-2020ರ ಮಾಹೆಗಳವರೆಗಿನ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕಗಳನ್ನು ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ."**

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಎಫ್‌ಡಿ 313 ವೆಚ್ಚ-1/2020 ದಿನಾಂಕ: 28.07.2021ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

N. Mangalagowri 6/8/21
**(ಎನ್.ಮಂಗಳಗೌರಿ)**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಇಂಧನ ಇಲಾಖೆ**

**ಇವರಿಗೆ:-**

1. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.

4. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
5. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ, ಮೈಸೂರು.

**<u>ಪ್ರತಿಗಳು:–</u>**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಬಿಡ್ ಏರಿಯಾ, ವಸಂತನಗರ, ಬೆಂಗಳೂರು–52.
6. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿ, ಕವಿಪ್ರನಿನಿ/ಕವಿನಿನಿ/ಪಿಸಿಕೆಎಲ್/ಕ್ರೆಡಲ್.
7. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ನಿರ್ದೇಶಕರು (ತಾಂತ್ರಿಕ), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ನಿರ್ದೇಶಕರು (ಆರ್ಥಿಕ), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಶಾಖಾರಕ್ಷಾ ಕಡತ / ಹೆಚ್ಚುವರಿ ಪ್ರತಿ.